**KANNADA CODE: 115**

**CLASS XII : (APRIL 2016 – MARCH 2017)**

**SUBJECT : KANNADA 2016-17**

**One Paper** **Time: 3 Hours** **Max. Marks : 100**

The question paper will be divided into four sections: **No. of Periods**

| | | | |
|---|---|---|---|
| Section A | Grammar | 25 Marks | 50 periods |
| Section B | Reading Comprehension | 10 Marks | 20 periods |
| Section C | Writing | 15Marks | 25 periods |
| Section D | Literature : | 50 Marks | 80 periods |
| | Prose (15 Marks) | ----- | |
| | Poetry (15 Marks) | ----- | |
| | Long prose (12 Marks) | ----- | |
| | Brief outline history of Kannada literature (Major poets & poetesses) (08 Marks) | | |

**DESIGN OF QUESTION PAPER**

| **Types of Questions** | **No. of Questions** | **Total No. of Marks** |
|---|---|---|
| | | |
| VSAQ of ½ mark | 06 | (06 x ½) = 03 |
| VSAQ of 1 mark | 21 | (21 x 1) = 21 |
| SA of 2 marks | 06 | (06 x 2) = 12 |
| SA of 2½ marks | 04 | (2½x 4) = 10 |
| SA of 3 marks | 03 | (03 x 3) = 09 |
| LA of 4 marks | 05 | (04 x 5) = 20 |
| LA of 5 marks | 05 | (05 x 5) = 25 |
| **Total** | **50** | **100** |

**05. CODE NO. 115**
**CLASS XII KANNADA**
**APRIL 2016 – MARCH 2017**
**One Paper 3 Hours Max. Marks : 100**

## SECTION A

**Marks 50** **Periods**

**Grammar** **25** **50**

(a) Transformation of Sentences 5

- (i) Question
- (ii) Negation
- (iii) Converting Compound to Simple sentences and vice-versa
- (iv) Changing Tenses
- (v) Roopa Nishpatti

(b) Translation of the given passage from English or Hindi intoKannada . 5

(c) Prosody 5

**Metre :**

- (i) Champakamala
- (ii) Kanda Padya
- (iii) Bhamini Shatpadi
- (iv) Tripadi
- (v) Sangatya
- (vi) Ragale

(d) Explaining Proverbs (2.5x2 marks) 5

(e) Questions based on Bhashabhyasa given at the end of the lessons. 5

## SECTION B

**Comprehention of an unseen passage with questions** **10** **20**

(i) Comprehension questions on a given passage. 5

(ii) Wriring the brief summary of the passage 0r poem with salient points. 5

## SECTION C

**Composition and writing** **15** **25**

(i) Reporting simple and common events 5

(ii) Writing letters to News paper Editors. 5

(iii) Summarising news paper, magazine and periodical writings. 5

## SECTION D

| Readings for detailed study (Literature) | | 50 |
|---|---|---|
| **(a)** Prose : All lessons need to be studied. | **15** | **30** |
| **(b)** Poetry : All poems need to be studied. | **15** | **30** |
| **(c)** Deergha Gadya : **KRISHNEGOWDANA AANE** **– By : K. P. POORNACHANDRA TEJASWI** (Ref.: Sahitya Sampada) | **12** | **20** |

**Prescribed Books :**

**(d) SAHITYA SAMPADA**

**(e) PALLAVA**

**Note :** All lessons to be studied.

Published by the Department of PUE, Bengaluru.

| | | |
|---|---|---|
| (f) A brief outline History of Kannada Literature consisting of major poets and poetesses included in the prescribed textbook. | **08** | **10** |

1. Shivakotyacharya
2. Pampa
3. Ranna
4. Harihara
5. Raghavanka
6. Kumarvyasa
7. Ratnakaravarni
8. Nagachandra
9. Vachanakararu : Basavanna, Allamaprabhu, Akkamahadevi.
10. Lakshmeesha
11. Nanjunda
12. Puligere Somanatha
13. Kuvempu
14. D. R. Bendre
15. Gopalakrishna Adiga
16. Chennaveera Kanavi
17. G. S. Shivarudrappa
18. B. G. L. Swamy
19. Vaidehi
20. Girish Karnad.

**Prescribed Books**

1. Kannada Sahitya Charitre – by R. S. Mugali
2. Kannada Sahityada Itihasa - by R. S. Mugali.

***********

# KANNADA CODE NO. 115
# CLASS XII : (APRIL 2016 – MARCH 2017)
# MODEL QUESTION PAPER
# SUBJECT : KANNADA 2016 – 17

**TIME : 3 HOURS** **MARKS : 100**

---

**ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.**

- **ವಿಭಾಗ – ಎ (ವ್ಯಾಕರಣ) 25 ಅಂಕಗಳು**
- **ವಿಭಾಗ – ಬಿ (ಅರ್ಥ ಗ್ರಹಿಕೆ) 10 ಅಂಕಗಳು**
- **ವಿಭಾಗ – ಸಿ (ಬರವಣಿಗೆ) 15 ಅಂಕಗಳು**
- **ವಿಭಾಗ – ಡಿ (ಪಠ್ಯಗಳ ಅಧ್ಯಯನ) 50 ಅಂಕಗಳು**

---

**ವಿಭಾಗ – ಎ (ವ್ಯಾಕರಣ)**

**ಪ್ರಶ್ನೆ 1. ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.** 1

ಗೀತಾ ಹೆಣ್ಣು ಮಗುವಿಗೆ ಜನ್ಮ ನೀಡಿದಳು.

**ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.** 1

ಮೈಸೂರಿನ ಕಟ್ಟಡಗಳು ಅತ್ಯಂತ ಎತ್ತರವಾಗಿವೆ.

**ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.** 1

ರವಿಯು ಶಾಲೆಗೆ ಹೋದರೂ ಕೆಟ್ಟ ಬುದ್ಧಿ ಬಿಡಲಿಲ್ಲ.

**ಈ) ಕೆಳಗಿನ ವಾಕ್ಯವನ್ನು ವರ್ತಮಾನಕಾಲಕ್ಕೆ ಪರಿವರ್ತಿಸಿ.** 1

ಕುಂಬಾರನು ಮಣ್ಣಿನಿಂದ ಮಡಕೆ ಮಾಡಿದನು.

**ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ.** 1

ಅನ್ನ ದಾನಕ್ಕಿಂತ ಮಿಗಿಲಾದ ದಾನವಿಲ್ಲವೆಂದು ನಮ್ಮವರು ನಂಬಿದ್ದರು.

**ಪ್ರಶ್ನೆ 2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ.** 5

The great advantage of early rising is the good start. It gives us inspiration in our day's work. The early riser has done a large amount of hard work before other men have got out of bed. In the early morning the mind is fresh and there are few sounds or other distractions, so that the work done at that time is generally well-done. In many cases the early riser also finds time to take some exercise in fresh morning air. This exercise supplies him with a fund of energy that will last until the evening. By begining so early he knows that he has plenty of time to do thoroughly all the work he can be expected to do and is not tempted to hurry over any part of it. Aii his work being finished in good time. He has a long interval of rest in the evening before the timely hour when he goes to bed. He gets to sleep several hours before midnight, at the time when sleep is most refreshing and after sound night's rest rises early next morning in good health and spirits for the labour of the next day.

**ಪ್ರಶ್ನೆ 3. ಕೆಳಗಿನವುಗಳಲ್ಲಿ ಬೇಕಾದ ಎರಡಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ.** **2.5x2=5**

1. ರಾವಣನ ರೂಪು ಸೀತಾ
   ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
2. ಆರಿಗುಸುರುವೆನಾರ ಸಾರುವೆ
   ನಾರಿಗೊರಲುವೆನಾರಿಗರುಹುವೆ
   ನಾರ ಬೇಡುವೆನಕಟ ಹೆಂಗಸು ಜನ್ಮವನು ಸುಡಲಿ
3. ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ

**ಪ್ರಶ್ನೆ 4. ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಗಾದೆಗಳನ್ನು ವಿಸ್ತರಿಸಿ ಬರೆಯಿರಿ.** **2.5x2=5**

1. ಬೆಳ್ಳಗಿರುವುದೆಲ್ಲ ಹಾಲಲ್ಲ.
2. ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು.
3. ಕಾಯಕವೇ ಕೈಲಾಸ

**ಪ್ರಶ್ನೆ 5. ಕೆಳಗಿನ ಪ್ರಶ್ನೆಗಳಿಗೆ ನಿರ್ದೇಶಿಸಿರುವಂತೆ ಉತ್ತರಿಸಿ.** **1/2x4=2**

**1. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ಮೀಯಲಾತ  2. ಬೈದನುಜಾತನಂ  3. ಒಬ್ಬಳನಾಳಲಾರಿರಿ  4. ರೇಖಾಂಶಗಳನ್ನು

**2. ಕೆಳಗಿನವುಗಳ ವಿಭಕ್ತಿ ಪ್ರತ್ಯಯ ಬರೆಯಿರಿ.** **1/2x2=1**

1. ಸುಜ್ಞಾನದಿಂ  2. ದೆಸೆದೆಸೆಗೆ

**3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.** **1x2=2**

1. ಜೋಗಿ  2. ಶ್ರೀ

## ವಿಭಾಗ – ಬಿ

**ಪ್ರಶ್ನೆ 6. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

ಒಲವು–ಪ್ರೀತಿ ಜೀವನದ ಬಹುಮುಖ್ಯವಾದ ಒಂದು ಸ್ಥಾಯಿಭಾವ. ಒಲವಿನ ಮುಖ ಹಲವು. ಕೆಲವರ ಜೀವನದಲ್ಲಿ ಕೆಲವು ಮುಖಗಳ ಆವಿಷ್ಕಾರ. ಎಲ್ಲ ಮುಖಗಳನ್ನು ಕಂಡವರು ಪ್ರಾಯಶಃ ಯಾರೂ ಇಲ್ಲ. ಈ ಒಲವು–ಪ್ರೀತಿಯನ್ನು ಹೆಣ್ಣು–ಗಂಡಿನ ಹರೆಯದ ಸೆಳೆತಕ್ಕೆ ಮಾತ್ರ ಸೀಮಿತಗೊಳಿಸಿ ಭ್ರಮಿಸಿಕೊಂಡವರೆ ಬಹಳ ಮಂದಿ.

ಪ್ರೀತಿಗೆ ಮುಖ್ಯವಾಗಿ ಮೂರು ಮಜಲುಗಳುಂಟು. ಹಿರಿಯರ ಬಗೆಗಿನ ಪ್ರೀತಿ, ಕಿರಿಯರ ಮೇಲಣ ಪ್ರೀತಿ ಮತ್ತು ಸಮಾನರಲ್ಲಿ ಪರಸ್ಪರ ಪ್ರೀತಿ. ನಮ್ಮಿಂದ ಎತ್ತರದಲ್ಲಿರುವ ವಸ್ತುವನ್ನು ಕಂಡು ಆ ಎತ್ತರಕ್ಕೆ ಗೌರವದ ಗರಿ ಮೂಡಿ ಪ್ರೀತಿಸುತ್ತೇವೆ. ನಾವು ಗುರುಹಿರಿಯರನ್ನು, ಅನುಭಾವಿಗಳು ಭಗವಂತನನ್ನು ಪ್ರೀತಿಸುವ ಬಗೆಯಿದು. ಪ್ರೀತಿಯ ಈ ಮೊದಲ ಮುಖವನ್ನೇ ಭಕ್ತಿ ವಾತ್ಸಲ್ಯ ಎಂದು ಕರೆಯುತ್ತಾರೆ. ನಮ್ಮಿಂದ ತಗ್ಗಿನಲ್ಲಿರುವ ವಸ್ತುವನ್ನು ಆ ತಗ್ಗಿನ ದಾರಿಗುಂಟ ಮಮತೆಯಿಂದ ಇಳಿದು ನಾವು ಪ್ರೀತಿಸುತ್ತೇವೆ. ತಂದೆ–ತಾಯಿ ತಮ್ಮ ಮಕ್ಕಳನ್ನು ಪ್ರೀತಿಸುವ ಬಗೆಯಿದು. ಪ್ರೀತಿಯ ಈ ಎರಡನೆಯ ಮುಖವನ್ನೇ ವಾತ್ಸಲ್ಯ ಎಂದು ಕರೆಯುತ್ತಾರೆ. ಇಬ್ಬರೂ ಒಂದೇ ನೆಲದಲ್ಲಿ ನಿಂತು, ಒಬ್ಬರನ್ನೊಬ್ಬರು ಪೂರ್ಣವಾಗಿ ಅರಿತುಕೊಂಡು ಪರಸ್ಪರ ಪ್ರೀತಿಸುತ್ತೇವೆ. ಗೆಳೆತನದ ನಿರ್ವ್ಯಾಜ ಪ್ರೀತಿ ಅದು. ಅದನ್ನೇ ಸ್ನೇಹ ಎಂದು ಕರೆಯುತ್ತಾರೆ. ಹೀಗೆ ಒಮ್ಮೆ ವಾತ್ಸಲ್ಯವಾಗಿ, ಒಮ್ಮೆ ಭಕ್ತಿಯಾಗಿ, ಒಮ್ಮೆ ಸ್ನೇಹವಾಗಿ ಈ ಪ್ರೀತಿ ಮುಪ್ಪುರಿಗೊಂಡು ಜೀವನವನ್ನು ನಿಯಂತ್ರಿಸುತ್ತದೆ. ಸ್ನೇಹ ಕೇಂದ್ರಬಿಂದು. ಅದರ ಆಚೆಯ ಮಗ್ಗಲು ವಾತ್ಸಲ್ಯ, ಈಚೆಯ ಮಗ್ಗಲು ಭಕ್ತಿ. ಸ್ನೇಹ ಜಲಾಶಯದಲ್ಲಿ ತುಂಬಿ ನಿಂತ ತಿಳಿನೀರು. ಒಡ್ಡು ತೆಗೆದರೆ ಇದು ಇಳಿಜಾರಿನಲ್ಲಿ ವಾತ್ಸಲ್ಯವಾಗಿ ಹರಿಯುತ್ತದೆ. ಬಿಸಿಲಿನ ಬಿಸಿ ಬಿದ್ದರೆ ಭಕ್ತಿಯ ಮೋಡವಾಗಿ ಮೇಲೇರುತ್ತದೆ. ಎಲ್ಲದರ ಕೊನೆಯ ಗುರಿ ಒಂದೇ.

ಹೀಗೆ ಇಡಿಯ ಬದುಕು ಪ್ರೀತಿಯ ದಾರದಲ್ಲಿ ಹೆಣೆದುಕೊಂಡಿದೆ. ಬಸಿರಿನಿಂದ ಹೊರಕ್ಕೆ ಬಿದ್ದ ಕ್ಷಣದಿಂದ ಉಸಿರು ನಿಲ್ಲುವ ತನಕ ಮನುಷ್ಯ ಜೀವನವನ್ನು ನಿಯಂತ್ರಿಸುವ ಏಕಸೂತ್ರ ಪ್ರೀತಿ.

**ಪ್ರಶ್ನೆಗಳು :**

1. ಜೀವನದ ಬಹುಮುಖ್ಯವಾದ ಒಂದು ಸ್ಥಾಯಿಭಾವ ಯಾವುದು? **1**
2. ಪ್ರೀತಿಯ ಮೂರು ಮಜಲುಗಳು ಯಾವವು? **1**
3. ಗೆಳೆತನದ ನಿರ್ವ್ಯಾಜ ಪ್ರೀತಿ ಯಾವುದು? **2**
4. ಪ್ರೀತಿ ಜೀವನವನ್ನು ಹೇಗೆ ನಿಯಂತ್ರಿಸುತ್ತದೆ? **1**

**ಪ್ರಶ್ನೆ 7. ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **5**

ಕಡ್ಡಿ ಕಡ್ಡಿ ಕೂಡಿಸಿ ಗೂಡು ಕಟ್ಟುವುದು ಪುಟ್ಟಹಕ್ಕಿ
ಬಿರುಗಾಳಿಯ ವಿರುದ್ಧ ಯುದ್ಧ ಸಾರುವುದು ಪುಟ್ಟಹಕ್ಕಿ.
ಸುರಿವ ಸೋನೆ ಮಳೆಗೆ ಅಂಜಿ ಮನೆಯೊಳಡಗಿದವು
ಗೂಡಿನಿಂದ ಹೊರಗೆ ಬಂದು ಕುಣಿಯುತ ಜಳಕ ಮಾಡುವುದು ಪುಟ್ಟಹಕ್ಕಿ.
ಕತ್ತಲೆ ಕಳೆದು ಬೆಳಕು ಹರಿದರೂ ನಿದ್ದೆಯಲಿ ಮುಳುಗಿರುವವು
ಸೂರ್ಯನನು ಸ್ವಾಗತಿಸುತ, ಗೀತೆ ಹಾಡುವುದು ಪುಟ್ಟಹಕ್ಕಿ.
ಮೂಡಿದ ರೆಕ್ಕೆಗಳ ಮುರಿಯುವ ಜನರಿರುವರು ಜಗದಲಿ
ಅವರ ನಯನಾಂಬರದಲಿ ಹಾರೆಂದರೆ ಹೇಗೆ ಹಾರುವುದು ಪುಟ್ಟಹಕ್ಕಿ.
ನೀವೆಷ್ಟು ತಡೆಗೋಡೆ ಕಟ್ಟಿದರೂ ಜಗದಂಗಳದಲಿ
ಆ ಮೂಲೆಯಿಂದ ಈ ಮೂಲೆಗೆ ಸದಾ ಹಾರುವುದು ಪುಟ್ಟಹಕ್ಕಿ.
ಭೂಮಿಯಲಿ ಭುಜಂಗನ ಭಯ, ಆಕಾಶದಲಿ ಗಿಡುಗನ ಭಯ
ಆವರಿಸಿದ್ದರೂ ಅಳುಕದೆ ರೆಕ್ಕೆ ಬಿಚ್ಚಿ ಹಾರುವುದು ಪುಟ್ಟಹಕ್ಕಿ.

## ವಿಭಾಗ – ಸಿ

**ಪ್ರಶ್ನೆ 8. ಕೆಳಗಿನ ಯಾವುದಾದರೂ ಒಂದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ.** **5**

1. ನೀವು ನೋಡಿದ ಒಂದು ಭೀಕರ ದುರಂತ.
2. ತಾಯಿಯನ್ನು ಕಳೆದುಕೊಂಡ ಮಗುವೊಂದು ನಿಮಗೆ ಸಿಕ್ಕಾಗ.

**ಪ್ರಶ್ನೆ 9. ನಿಮ್ಮ ಜಿಲ್ಲೆಯಲ್ಲಿ ತಲೆದೋರಿರುವ ಬರಗಾಲದ ಪರಿಸ್ಥಿತಿಯ ಬಗ್ಗೆ ವಿವರಿಸುತ್ತ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.** **5**

**ಪ್ರಶ್ನೆ 10. ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ.** **5**

ಭಾಷೆಗಳ ಸಾವು ಹಲವಾರು ಬಾರಿ ಇತಿಹಾಸದಲ್ಲಿ ಪುನರಾವರ್ತನೆಯಾಗಿದೆ. ಭಾರಿ ಪ್ರವಾಹ ಇಲ್ಲವೇ ಯುದ್ಧಗಳು ಭಾಷೆಗಳ ಸಾವಿಗೆ ಅಲ್ಪ ಪ್ರಮಾಣದಲ್ಲಿ ಕಾರಣವಾದ ಅಂಶಗಳಾಗಿದ್ದರೂ ಯುರೋಪ್ ಸಂಸ್ಕೃತಿ ಆಧುನಿಕತೆಯ ಹೆಸರಿನಲ್ಲಿ ವಿಶ್ವಾದ್ಯಂತ ಪ್ರಸರಿಸುತ್ತ ಸ್ಥಳೀಯ ಭಾಷೆಗಳ ಸಾವಿಗೆ ಕಾರಣವಾಗುತ್ತಿವೆ. ತಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಭಾಷೆಗಳನ್ನು ಕೀಳಾಗಿ ಕಂಡು ವಿದೇಶಿ ಸಂಸ್ಕೃತಿಯನ್ನು ಅನುಸರಿಸುವುದು ಮತ್ತು ಅವರ ಭಾಷೆಯನ್ನಾಡುವುದೇ ಹೆಚ್ಚುಗಾರಿಕೆ ಎನ್ನುವ ಸಾಮೂಹಿಕ ಸನ್ನಿವೇಶ ಜಗತ್ತನ್ನಾವರಿಸಿದೆ. ಇದೇ ಸಂಸ್ಕೃತಿಯ ಅಧಃಪತನದ ಮೂಲ. ಸ್ಥಳೀಯ ಭಾಷೆಗಳ ಸಾವು ಎಂದರೆ ಅದು ಆ ಭಾಷೆಯನ್ನಾಡುತ್ತಿದ್ದವರ ದುರಂತ ಮಾತ್ರವಲ್ಲ, ಜಗತ್ತಿಗೇ ಆದ ಸಾಂಸ್ಕೃತಿಕ ನಷ್ಟ. ಈ ಕಾರಣಕ್ಕಾಗಿಯೇ ಯುನೆಸ್ಕೋ ಅಪಾಯದಲ್ಲಿರುವ ಭಾಷೆಗಳ ಉಳಿವಿಗಾಗಿ ಆಸಕ್ತಿ ತಳೆದು 1996ರಲ್ಲಿ ಜಗತ್ತಿನಾದ್ಯಂತ ಅಪಾಯದಲ್ಲಿರುವ ಮತ್ತು ಅದೃಶ್ಯವಾಗುತ್ತಿರುವ ಭಾಷೆಗಳ ನಕ್ಷೆಯನ್ನು ಸಿದ್ಧಪಡಿಸಿತು. ಯುನೆಸ್ಕೋದ ಈ ಶ್ರಮ ಪ್ರಶಂಸಾರ್ಹ.

ಭಾಷೆಗಳ ನಾಶ ಎನ್ನುವುದು ಒಂದು ದೇಶಕ್ಕೆ ಸೀಮಿತವಾದುದಲ್ಲ. ಇಂಗ್ಲೀಷ ವ್ಯಾಮೋಹಕ್ಕೆ ಒಳಗಾಗಿರುವ ವಿಶ್ವದ ಎಲ್ಲ ಪ್ರದೇಶಗಳ ಭಾಷೆಗಳು ಅಪಾಯದಲ್ಲಿವೆ. ಆದ್ದರಿಂದ ಅಳಿವಿನ ಹಾದಿಯಲ್ಲಿರುವ ಭಾಷೆಗಳ ಉಳಿವಿಗಾಗಿ ಭಾರೀ ಆಸಕ್ತಿ ತೋರಬೇಕಾಗಿದೆ. ಅವರವರ ಭಾಷೆಯನ್ನು ಕಲಿಯಲು ಯುವ ಪೀಳಿಗೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಆ ಮೂಲಕ ವಿದೇಶೀ ಭಾಷೆ ಮತ್ತು ಸಂಸ್ಕೃತಿಯನ್ನು ಅಪ್ಪಿಕೊಳ್ಳುವವರ ಕಣ್ತೆರೆಸಬೇಕಾಗಿದೆ.

**ವಿಭಾಗ ಡಿ – (ಪಠ್ಯಗಳ ಅಧ್ಯಯನ) :**

**ಗದ್ಯಭಾಗ**

**ಪ್ರಶ್ನೆ 11. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು?
1. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?
2. ಹೊಳೆ ಯಾವುದಕ್ಕೆ ಹೊಂಚು ಹಾಕುತ್ತಿರುತ್ತದೆ?
3. ದೇವರಿಗೆ ಹತ್ತಿರವಾದವರು ಯಾರು?
4. ಎಂತಹ ಗದ್ಯದಲ್ಲಿ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?

**ಪ್ರಶ್ನೆ 12. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು?
2. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ?
3. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

**ಪ್ರಶ್ನೆ 13. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **3x1=3**

1. "ಅದೃಷ್ಟವನ್ನೇ ಅವಲಂಬಿಸಿ ಬದುಕಲು ಸಾಧ್ಯವೇ?"
2. "ಅನಕ್ಷರಸ್ಥರ ಪಾರ್ಲಿಮೆಂಟು"
3. "ಇದೇ ಲೋಟವಲ್ಲವೇ..... ತನ್ನ ಬೆವರಿನ ಬೆಲೆ ಕಳೆದದ್ದು"

**ಪ್ರಶ್ನೆ 14. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.
2. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿರಿ.

**ಪದ್ಯಭಾಗ**

**ಪ್ರಶ್ನೆ 15. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?
2. ನಿಷ್ಪ್ರಯೋಜಕನಾದ ಮಗ ಯಾರು?
3. ಉತ್ತಮರ ಗೆಳೆತನ ಹೇಗೆ ಇರಬೇಕು?
4. ಜೀಸಸ್‌ನ ಮುಖಮುದ್ರೆ ಏನನ್ನು ನುಡಿವಂತಿದೆ?
5. ಕವಯಿತ್ರಿ ಸುಕನ್ಯಾ ಮಾರುತಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?

**ಪ್ರಶ್ನೆ 16. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ಸೀತೆಯ ತಲ್ಲಣಕ್ಕೆ ಕಾರಣವೇನು?
2. ಮಗು ಏನೇನು ಕಲಿಯಿತು?
3. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

**ಪ್ರಶ್ನೆ 17. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **3x1=3**

1. "ಕಲಿ ಭೀಮನೇ ಮಿಡುಕುಳ್ಳ ಗಂಡನು".
1. "ತುಂಬಿರುವ ತನಕ ತುಂತುಂಬಿ ಕುಡಿಯಬೇಕು".

**ಪ್ರಶ್ನೆ 18. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಜಾಲಿಮರ ಮತ್ತು ದುರ್ಜನರನ್ನು ಪುರಂದರದಾಸರು ಸಮೀಕರಿಸಿರುವುದರ ಔಚಿತ್ಯವನ್ನು ಚರ್ಚಿಸಿರಿ.
2. ವೃದ್ಧರ ತವಕ-ತಲ್ಲಣಗಳನ್ನು ಕವಯಿತ್ರಿ ಲಲಿತಾ ಸಿದ್ಧಬಸವಯ್ಯ ಅವರು ಹೇಗೆ ಚಿತ್ರಿಸಿದ್ದಾರೆ?

**ದೀರ್ಘ ಗದ್ಯ (ಕೃಷ್ಣೇಗೌಡನ ಆನೆ)**

**ಪ್ರಶ್ನೆ 19. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ಮೂರಕ್ಕೆ)** **1x3=3**

1. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದ?
2. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
3. ಪುಟ್ಟಯ್ಯ ಯಾರು?
4. ಪೋಲೀಸರು ಏನೆಂದು ಮಹಜರು ಬರೆದುಕೊಂಡರು?

**ಪ್ರಶ್ನೆ 20. ಕೆಳಗಿನ ಪ್ರಶ್ನೆಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **2x1=2**

1. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
2. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?

**ಪ್ರಶ್ನೆ 21. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ನಿನ್ನ ಪುಕಾರೇನಿದ್ರೂ ಬರ್ವಣಿಗೇಲಿ ಇರಬೇಕು".
2. "ಕಾಡಾನೆಗಳ ಕಾಟಕ್ಕೂ ಈ ಹೆಣ್ಣಾನೆಯೇ ಕಾರಣ".

**ಪ್ರಶ್ನೆ 22. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
2. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?

**ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)**

**ಪ್ರಶ್ನೆ 23. ಕೆಳಗಿನ ಯಾವುದಾದರೂ ಇಬ್ಬರು ಕವಿಗಳ ಕವಿ-ಕೃತಿ ಪರಿಚಯ ಮಾಡಿಕೊಡಿ.** **4x2=8**

1. ನಾಗಚಂದ್ರ
2. ಕುಮಾರವ್ಯಾಸ
3. ಕೆ. ಎಸ್. ನಿಸಾರ್ ಅಹಮದ್.

******************